# ಭವ್ಯ ರಾಷ್ಟ್ರ ನಿರ್ಮಾಣಕ್ಕಾಗಿ ಯುವ ಶಕ್ತಿ ಸದ್ಬಳಕೆಯಾಗಲಿ




ಸೇಡಂನ ನೃಪತುಂಗ ಮಹಾವಿದ್ಯಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಮತ್ತು ಉನ್ನತ ಶಿಕ್ಷಣ ಆಯ್ಕೆ ಕುರಿತು ಹಮ್ಮಿಕೊಂಡ ತರಬೇತಿಯಲ್ಲಿ ಕೆಕೆ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಡಾ. ಬಸವರಾಜ ಪಾಟೀಲ ಸೇಡಂ ಮಾತನಾಡಿದರು. ಬೀದರ್ ಡಿಸಿ ಗೋವಿಂದರಡ್ಡಿ ಇದ್ದರು.

**ಸೇಡಂನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ**

**ಉನ್ನತ ಶಿಕ್ಷಣ ಆಯ್ಕೆ ತರಬೇತಿ**

**ವಿಕ ಸುದ್ದಿಲೋಕ** ಸೇಡಂ

ರಾಷ್ಟ್ರ ನಿರ್ಮಾಣಕ್ಕೆ ಯುವ ಶಕ್ತಿ ಸದ್ಬಳಕೆಯಾಗಬೇಕು ಎಂದು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಅಧ್ಯಕ್ಷ ಡಾ. ಬಸವರಾಜ ಪಾಟೀಲ ಸೇಡಂ ಹೇಳಿದರು.

ಪಟ್ಟಣದ ನೃಪತುಂಗ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಸ್ಪರ್ಧಾತ್ಮಕ ಪರೀಕ್ಷೆಗಳ ತಯ್ಯಾರಿ ಮತ್ತು ಉನ್ನತ ಶಿಕ್ಷಣ ಆಯ್ಕೆ ಕುರಿತು ತರಬೇತಿ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಯುವ ಸಮೂಹ ದೇಶದ ಸಂಪತ್ತು. ಯುವಕರು ಉತ್ತಮ ಜ್ಞಾನ ಪಡೆದುಕೊಂಡು ರಾಷ್ಟ್ರ ಸೇವೆ ಮಾಡಲು ಮುಂದಾಗಬೇಕು. ಭವ್ಯ ಪರಂಪರೆ ಮತ್ತು ಸಂಸ್ಕೃತಿ ವಾರಸುದಾರರಾಗಬೇಕು ಎಂದು ಸಲಹೆ ನೀಡಿದರು.

ಬೀದರ್ ಜಿಲ್ಲಾಧಿಕಾರಿ ಗೋವಿಂದ ರಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಓದುವ, ಬರೆಯುವ ಕಲೆಯನ್ನು ರೂಢಿಸಿಕೊಳ್ಳಬೇಕು. ಐಎಎಸ್ ಮತ್ತು ಕೆಎಎಸ್ ಪರೀಕ್ಷೆಗಳನ್ನು ಬರೆಯಬೇಕು. ನಿರಂತರ ಪ್ರಯತ್ನಿಸಬೇಕು. ಚರ್ಚೆ ಮಾಡುವ ಮೂಲಕ ಸ್ಮರಣ ಶಕ್ತಿ ಹೆಚ್ಚಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪಿಎಸ್‌ಐ ಸೋಮಲಿಂಗ ಒಡೆಯರ, ಪ್ರಾಚಾರ್ಯ ಶಾಮಸುಂದರ ಕಲಶಾಲ ಅಧ್ಯಕ್ಷತೆ ವಹಿಸಿದ್ದರು. ದೀಪಮಾಲಾ, ಮಹಾಂತಗೌಡ, ಸೌಜನ್ಯ, ಋತುಜ ಅನಿಸಿಕೆ ವ್ಯಕ್ತಪಡಿಸಿದರು. ಸಂಸ್ಥೆಯ ಅಧ್ಯಕ್ಷ ಸದಾಶಿವ ಸ್ವಾಮಿ, ಕಾರ್ಯದರ್ಶಿ ಅನುರಾಧಾ ಪಾಟೀಲ, ಬಸವಲಿಂಗಮ್ಮ ಪಾಟೀಲ, ಡಾ. ಮನ್ನೆ ಹಾಶರಡ್ಡಿ, ನರೇಂದ್ರ ರುದ್ನೂರು, ವಿಶ್ವನಾಥ ಕೋರಿ, ಅನಿಲ ಮಾಲಪಾಣಿ, ಚನ್ನಬಸಪ್ಪ ಗವಿ, ಆರೋಗ್ಯಪ್ಪ ಮುಕ್ತೇದಾರ, ಶರಣಗವಡ ಪಾಟೀಲ ಇದ್ದರು. ಜಗದೇವ ಸಾಲಳ್ಳಿ ನಿರೂಪಿಸಿದರು, ಅಮರಮ್ಮ ಪ್ರಾರ್ಥಿಸಿದರು. ಅಂಜನಾ ವರದಿ ಮಂಡಿಸಿದರು. ಡಾ. ರೇವಣಸಿದ್ದಯ್ಯ ಮಠ ಸ್ವಾಗತಿಸಿದರು. ಪ್ರಾಚಾರ್ಯ ಶಾಮಸುಂದರ ಕಲಾಲ ಪ್ರಾಸ್ತಾವಿಕ ಮಾತನಾಡಿದರು. ವಿಜಯಶಂಕರ ಹೊಸಪೇಟ ವಂದಿಸಿದರು.